**ಎಸ್ ಸಿ ನಂ.118/2019 ಪಿಡಬ್ಲ್ಯೂ.7**

**ಮಧ್ಯಂತರ ಆದೇಶ ದಿನಾಂಕ 28.02.2026 ರಂತೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 04.04.2026.**

**ಮುಂದುವರೆದ ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ವಿ ಎಸ್ ಭಟ್ ವಕೀಲರಿಂದಃ**

*1.* ಚಾಸಾ.*1* ನೀಡಿದ ದೂರಿನ ಈ ಪ್ರಕರಣದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಆ ಹೇಳಿಕೆಯಲ್ಲಿ ನಾನು *1* ನೇ ಆರೋಪಿ ಚಾಕುವಿನಿಂದ, *2* ನೇ ಆರೋಪಿ ಮಚ್ಚಿನಿಂದ ಹಲ್ಲೆ ಮಾಡಿದ್ದಾರೆಂದು ಹೇಳಿಲ್ಲ ಎಂದರೆ ಸರಿಯಲ್ಲ. ನನಗೆ ಈಗ ತೋರಿಸುತ್ತಿರುವ ನಾನು ನೀಡಿದ್ದು ಎಂದು ಹೇಳಲಾದ ಹೇಳಿಕೆಯಲ್ಲಿ *1* ನೇ ಆರೋಪಿ ಮಚ್ಚು ಮತ್ತು *2* ನೇ ಆರೋಪಿ ಚಾಕುವಿನಿಂದ ಹಲ್ಲೆ ಮಾಡಿದರು ಎಂದು ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಚಾಕು ಮತ್ತು ಚೂರಿಯಿಂದ ಹಲ್ಲೆ ಮಾಡಿದ್ದಾರೆಂದು ಹೇಳಿದ್ದೇನೆಂದು ನುಡಿಯುತ್ತಾರೆ. ನಮ್ಮ ಮೇಲೆ ಇರುವ ಪ್ರಕರಣದಿಂದ ತಪ್ಪಿಸಿಕೊಳ್ಳಲು ಮತ್ತು ಚಾಸಾ.*1* ನೀಡಿದ ದೂರಿಗೆ ಪೂರಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವೆಲ್ಲಾ ಆರೋಪಿಗಳ ಮೇಲೆ ದಾಳಿ ಮಾಡಿ ಅವರ ಮೇಲೆ ಹಲ್ಲೆ ಮಾಡಿ ಇಬ್ಬರನ್ನು ಕೊಲೆ ಮಾಡಿದ್ದೇವೆ ಮತ್ತು ಇಬ್ಬರಿಗೆ ಮಾರಣಾಂತಿಕ ಹಲ್ಲೆ ಮಾಡಿದ್ದೇವೆಂದರೆ ಸರಿಯಲ್ಲ. ನಾವೇ ಆರೋಪಿಗಳ ಮೇಲೆ ದಾಳಿ ಮಾಡಿದ್ದೇವೆಂದರೆ ಸರಿಯಲ್ಲ. ನಾನು ಎಸ್ ಸಿ ನಂ.*82/2017* ರಲ್ಲಿ ಆರೋಪಿ ಎಂದರೆ ಸರಿ. ನಮ್ಮ ಮೇಲೆ ಇರುವ ಆರೋಪದಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.